# ಪೊಲೀಸರಿಗೆ ಏನೇನೂ ಸಂಬಂಧವಿಲ್ಲ

ಪತ್ತೆದಾರಿಗಳಿಗೂ ಪೊಲೀಸರಿಗೂ ನಂಟು ಇರುತ್ತದೆ ಎಂದು ಎಷ್ಟೋ ಜನರು ತಪ್ಪು ಭಾವಿಸಿರುತ್ತಾರೆ. ವಾಸ್ತವದಲ್ಲಿ ತಮಗೂ ಪತ್ತೆದಾರರಿಗೂ ನಮಗೂ ಏನೇನೂ ಸಂಬಂಧ ಇರುವುದಿಲ್ಲ ಎಂದು ದಾವಣಗೆರೆಯ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಸ್ಪಷ್ಟಪಡಿಸಿದರು.

ಕರ್ನಾಟಕ ಸೆಕ್ಯುರಿಟಿ ಏಜೆನ್ಸೀಸ್ ರೆಗ್ಯುಲೇಷನ್ ಆ್ಯಕ್ಟ್ (ಕರ್ನಾಟಕ ಭದ್ರತಾ ಸಂಸ್ಥೆಗಳ ನಿಯಂತ್ರಣ ಕಾಯ್ದೆ) ಎನ್ನುವುದು ಇದೆ. ಇದು ಬ್ಯಾಂಕ್‌ಗಳ ಎಟಿಎಂಗಳು, ವಿವಿಧ ಕಟ್ಟಡಗಳಿಗೆ ಭದ್ರತೆ ಒದಗಿಸುವ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಪೊಲೀಸರಿಂದ ಅನುಮತಿ ಪಡೆಯುವುದಲ್ಲದೆ ಪರವಾನಗಿ ಹೊಂದುವುದೂ ಇಂಥ ಸಂಸ್ಥೆಗಳಿಗೆ ಅನಿವಾರ್ಯ. ಆದರೆ, ಪತ್ತೆದಾರಿ ಸಂಸ್ಥೆಗಳಿಗೆ ಇಂತಹ ಯಾವ ನಿರ್ಬಂಧವೂ ಇಲ್ಲ. ಹೀಗಾಗಿ ಅದು ಅಧಿಕೃತ ಸಾಂಸ್ಥಿಕ ಚೌಕಟ್ಟಿಗೆ ಬರುವುದಿಲ್ಲ ಎಂದು ಅವರು ತಿಳಿಸಿದರು.

‘ಪೊಲೀಸ್ ಇಲಾಖೆಯು ಅಪರಾಧ ಪತ್ತೆ ಮಾಡುವಾಗ ವಿಧಿ ವಿಜ್ಞಾನ ಪರೀಕ್ಷೆ ನಡೆಸಲು ಅಧಿಕೃತ ಏಜೆನ್ಸಿಗಳನ್ನೇ ಅವಲಂಬಿಸುತ್ತದೆ. ಇವನ್ನು ಟ್ರೂತ್ ಲ್ಯಾಬ್ಸ್ ಎಂದು ಕರೆಯುತ್ತೇವೆ. ಕೆಲವು ಖಾಸಗಿ ವಿಧಿ ವಿಜ್ಞಾನ ಪರೀಕ್ಷಾ ಸಂಸ್ಥೆಗಳೂ ಇರುತ್ತವೆ. ಅವುಗಳ ವರದಿಗಳನ್ನು ಎಷ್ಟೋ ಸಲ ನ್ಯಾಯಾಲಯ ಸಾಕ್ಷ್ಯವಾಗಿ ಪರಿಗಣಿಸುವುದಿಲ್ಲ’ ಎಂದು ಅವರು ಬೆಳಕು ಚೆಲ್ಲಿದರು.

ಖಾಸಗಿ ಪತ್ತೆದಾರಿ ಭದ್ರತಾ ಮಸೂದೆಯನ್ನು 2007ರಲ್ಲಿ ಸಿದ್ಧಪಡಿಸಲಾಗಿತ್ತು. ಅದು ಇದುವರೆಗೂ ಕಾಯ್ದೆಯಾಗಿ ಜಾರಿಯಾಗಿಲ್ಲ. ಹೀಗಾಗಿ ಕಾನೂನಾತ್ಮಕವಾಗಿ ಪತ್ತೆದಾರಿ ಸಂಸ್ಥೆಗಳಿಗೆ ಅಸ್ಮಿತೆ ಇಲ್ಲ ಎಂದು ಹನುಮಂತರಾಯ ಮಾಹಿತಿ ನೀಡಿದರು.



ಹನುಮಂತರಾಯ

ಪೊಲೀಸ್ ಇಲಾಖೆಯಲ್ಲಿ ವಿವಿಧ ಪಟ್ಟಣ ನಗರಗಳಲ್ಲಿ ಕೆಲಸ ನಿರ್ವಹಿಸಿರುವ ಅವರು, ಎಲ್ಲಿಯೂ ಪತ್ತೆದಾರಿಗಳ ಅವಲಂಬನೆಯನ್ನು ಕಂಡಿಲ್ಲ. ‘ಬಳ್ಳಾರಿ, ರಾಯಚೂರು, ದಾವಣಗೆಯಂಥ ನಗರಗಳಲ್ಲಿ ಜನರಿನ್ನೂ ಅಂಥ ಸಂಸ್ಥೆಗಳ ನೆರವನ್ನು ಪಡೆಯಲು ಆಸಕ್ತಿ ತೋರಿಸಿಲ್ಲ. ಬೆಂಗಳೂರಿನಂತಹ ಮಹಾನಗರದಲ್ಲಿ ಸಂಬಂಧಗಳ ಸಿಕ್ಕುಗಳು, ಅನುಮಾನಗಳು ವ್ಯಾಪಕವಾಗುತ್ತಿರುವುದರಿಂದ ಅವುಗಳ ಮೊರೆಹೋಗುತ್ತಿದ್ದಾರಷ್ಟೆ’ ಎನ್ನುವುದು ಅವರ ಅನುಭವದ ಮಾತು.





ಪಳಗಬೇಕು. ಬೆಂಗಳೂರಿನಲ್ಲಿ ಈ ಕೆಲಸ ಕಲಿಯುವ ಆಸಕ್ತಿ ಇರುವವರು ತುಂಬಾ ಕಡಿಮೆ ಎನ್ನುತ್ತಾರೆ ಪತ್ತೆದಾರರಾದ ಆಕೃತಿ ಖತ್ರಿ.

‘ಇದು ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಹಾಯಾಗಿ ಮಾಡುವ ಕೆಲಸವಲ್ಲ. ಕ್ಷೇತ್ರಕ್ಕೆ ಇಳಿಯಬೇಕು. ಗಂಟೆಗಟ್ಟಲೆ ಕಾಯಬೇಕು. ಗ್ರಾಹಕರು ಬಯಸುವ ಮಾಹಿತಿ ಸಂಗ್ರಹಿಸಲು ಅನೇಕರ ಬೆನ್ನುಹತ್ತಬೇಕು. ಸಂಯಮ, ಸಮಯ ಎರಡನ್ನೂ ಇದು ಬೇಡುತ್ತದೆ. ಬೆಂಗಳೂರಿನಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿವೆ. ಸ್ವಿಗ್ಗಿ, ಝೊಮ್ಯಾಟೊ ತರಹದ ಆಹಾರ ಪೂರೈಸುವ ಅರೆಕಾಲಿಕ ಕೆಲಸಗಳಲ್ಲೂ ಒಳ್ಳೆಯ ಪಗಾರ ಸಿಗುತ್ತಿದೆ. ಇನ್ನು ದತ್ತಾಂಶ ದಾಖಲಿಸುವ, ಹೊರಗುತ್ತಿಗೆ ಕಾರ್ಯನಿರ್ವಹಿಸುವ ಕಂಪನಿಗಳಲ್ಲೂ ಯುವಕರಿಗೆ ಕೆಲಸಗಳು ಸಿಗುತ್ತಿವೆ. ಬೇರೆ ಎಲ್ಲ ಪ್ರಮುಖ ಮಹಾನಗರಗಳಲ್ಲಿ ಯುವಕ–ಯುವತಿಯರು ಪತ್ತೆದಾರಿ ಕೆಲಸ ಕಲಿಯಲು ಮುಂದೆ ಬರುತ್ತಾರೆ. ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀರಸವಾಗಿದೆ’ ಎನ್ನುವುದು ಆಕೃತಿ ಅವರ ಅನಿಸಿಕೆ.

ಪತ್ತೆದಾರರಿಗೆ ಬೇಡಿಕೆ ಹೆಚ್ಚಾಗಲು ಮುಖ್ಯ ಕಾರಣ ಡಿಜಿಟಲೀಕರಣ. ಮೊಬೈಲ್ ಕರೆಗಳು ದಶಕಗಳ ಹಿಂದೆ ಉಚಿತ ಇರಲಿಲ್ಲ. ಒಳಬರುವ ಕರೆಗೂ ದರ ಇರುತ್ತಿತ್ತು. ಹೊರಹೋಗುವ ಕರೆಗಳಿಗಂತೂ ದುಬಾರಿ ಶುಲ್ಕ. ಆಮೇಲೆ ದೂರಸಂಪರ್ಕ ಕ್ರಾಂತಿ ಆಯಿತು. ಸೈಕಲ್ ಶಾಪ್‌ನಲ್ಲಿ ಚಿಕ್ಕಾಸಿಗೆ ದುಡಿಯುವ ಕಾರ್ಮಿಕನಿಂದ ಹಿಡಿದು ಬಿಲಿಯನೇರ್‌ಗಳವರೆಗೆ ಮೊಬೈಲ್ ದಕ್ಕಿದ್ದು ಸಂಪರ್ಕವನ್ನು ಸಲೀಸಾಗಿಸಿತು. ಅಂಗೈ ಅಗಲದ ಮೊಬೈಲ್‌ನಲ್ಲಿ ಇವತ್ತು ಬಳಕೆದಾರನ ಸಕಲೇಷ್ಟಗಳೂ ವಿಲೇವಾರಿಯಾಗುತ್ತಿರುತ್ತವೆ. ಭರಿಸುವ ಶುಲ್ಕಗಳು, ಕೊಳ್ಳುವ ವಸ್ತುಗಳು,